ಮೈಸೂರು ವಿಶ್ವವಿದ್ಯಾನಿಲಯ
**ದೈಹಿಕ ಶಿಕ್ಷಣ ವಿಭಾಗ**
**ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–05**

**ಡಾ. ಸಿ ವೆಂಕಟೇಶ್** — **dir.deptofphyedn@gmail.com**
**ನಿರ್ದೇಶಕರು.** — **Ph. No : 0821-2419288**

## ಪ್ರಕಟಣೆ ಕೃಪೆಗಾಗಿ

ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ 2025–26ನೇ ಸಾಲಿನ ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಜಿಮ್ನಾಸ್ಟಿಕ್, ಕುಸ್ತಿ, ಈಜು, ಯೋಗಾಸನ, ಕರಾಟೆ, ಕಿಕ್ ಬಾಕ್ಸಿಂಗ್, ಬಾಕ್ಸಿಂಗ್, ಭಾರ ಎತ್ತುವ ಹಾಗೂ ಅತ್ಯುತ್ತಮ ದೇಹಾರ್ಢ್ಯ ಸ್ಪರ್ಧೆಗಳ ಸಮಾರೋಪ ಸಮಾರಂಭವು ದಿನಾಂಕ: 04.10.2025 ರಂದು ಸಂಜೆ 4.00 ಗಂಟೆಗೆ ಸ್ಪೋರ್ಟ್ಸ್ ಪೆವಿಲಿಯನ್, ಒಳಾಂಗಣ ಕ್ರೀಡಾಂಗಣದಲ್ಲಿ ನಡೆದಿದ್ದು, ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ. ಎಂ. ಮಹದೇವ ಮೂರ್ತಿ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು ಹಾಗೂ ಡಾ. ಸದಾಶಿವ ಭಟ್, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರು (ನಿವೃತ್ತ), ಸೋಮಾನಿ ಕಾಲೇಜು, ಮೈಸೂರು. ಇವರು ಸ್ಪರ್ಧಿಗಳಿಗೆ ಬಹುಮಾನ ವಿತರಣೆ ಮಾಡಿದರು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ.ಸಿ.ವೆಂಕಟೇಶ್ ರವರು ವಹಿಸಿದ್ದರು.




**ಚಿತ್ರ 1: ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮಿಸ್ಟರ್ ಮೈಸೂರು ಪ್ರಶಸ್ತಿ ಗೆದ್ದ ಡಿ. ಬನುಮಯ್ಯ ಕಾಲೇಜಿನ ಶ್ರೀ ರವಿ ಕಾರಿಯಪ್ಪರವರು ಪಡೆದಿರುತ್ತಾರೆ.**




**ಚಿತ್ರ 2: ಕುಸ್ತಿ ಪಂದ್ಯಾವಳಿಯಲ್ಲಿ ತಂಡ ಪ್ರಶಸ್ತಿಯನ್ನು ಮಹಾಜನ ಕಾಲೇಜಿನ ತಂಡ ಪಡೆಯಿತು.**

ಈ ಕ್ರೀಡಾಕೂಟದಲ್ಲಿ ನಡೆದ 08 ಕ್ರೀಡಾ ಸ್ಪರ್ಧೆಗಳಲ್ಲಿ ಈ ಮೇಲೆ ತಿಳಿಸಿರುವ ಕಾಲೇಜುಗಳು ಮಹಿಳಾ ಮತ್ತು ಪುರುಷರ ವಿಭಾಗದಲ್ಲಿ ಕ್ರೀಡಾ ತಂಡ ಪ್ರಶಸ್ತಿಯನ್ನು ಪಡೆದಿರುತ್ತಾರೆ.

ಕುಸ್ತಿ ಪಂದ್ಯಾವಳಿಯಲ್ಲಿ ತಂಡ ಪ್ರಶಸ್ತಿಯನ್ನು ಮಹಾಜನ ಕಾಲೇಜಿನ ತಂಡ ಪಡೆಯಿತು. ಕುಸ್ತಿ ಫ್ರೀಸ್ಟೈಲ್ ಪಂದ್ಯಾವಳಿಯಲ್ಲಿ ಮಹಿಳೆಯರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಮಹಾರಾಣಿ ವಾಣಿಜ್ಯ & ಮ್ಯಾನೇಜ್‌ಮೆಂಟ್ ಕಾಲೇಜಿನ ತಂಡ ಪಡೆಯಿತು. ಕುಸ್ತಿಯ ಗ್ರೀಕೋ ರೋಮನ್ ಪಂದ್ಯಾವಳಿಯ ಪುರುಷರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಸ್ನಾತಕೋತ್ತರ ಮಂಡಳಿ, ಮಾನಸಗಂಗೋತ್ರಿ ತಂಡ ಪಡೆಯಿತು. ಕಿಕ್ ಬಾಕ್ಸಿಂಗ್ ಪುರುಷರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಟಿ.ಟಿ.ಎಲ್ ಕಾಲೇಜಿನ ತಂಡ ಪಡೆಯಿತು. ಕಿಕ್ ಬಾಕ್ಸಿಂಗ್ ಮಹಿಳೆಯರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಶ್ರೀ ದೇವರಾಜ ಅರಸ್ ಕಾಲೇಜಿನ ತಂಡ ಪಡೆಯಿತು. ಕರಾಟೆ ಪುರುಷರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಸರ್ಕಾರಿ ಪ್ರ.ದ.ಕಾ ಬಿಳಿಕೆರೆ ತಂಡ ಪಡೆಯಿತು. ಕರಾಟೆ ಮಹಿಳೆಯರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಸರ್ಕಾರಿ ಪ್ರ.ದ.ಕಾ ಹುಲ್ಲಳ್ಳಿ ತಂಡ ಪಡೆಯಿತು. ಯೋಗ ಪುರುಷರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಜೆ.ಎಸ್.ಎಸ್ ಕಾಲೇಜು ನಂಜನಗೂಡು ತಂಡ ಪಡೆಯಿತು. ಭಾರ ಎತ್ತುವ ಪುರುಷರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಶೇಷಾದ್ರಿಪುರಂ ಪ್ರ.ದ.ಕಾಲೇಜು ತಂಡ ಪಡೆಯಿತು. ಭಾರ ಎತ್ತುವ ಮಹಿಳೆಯರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಶ್ರೀ ದೇವರಾಜ ಅರಸ್ ಕಾಲೇಜು ಹುಣಸೂರು ತಂಡ ಪಡೆಯಿತು. ಈಜುಕೊಳ ಪುರುಷರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಸೇಪಿಯಂಟ್ ಪ್ರ.ದ.ಕಾಲೇಜಿನ ತಂಡ ಪಡೆಯಿತು. ಈಜುಕೊಳ ಮಹಿಳೆಯರ ವಿಭಾಗದಿಂದ ತಂಡ ಪ್ರಶಸ್ತಿಯನ್ನು ಫೈನ್ ಆರ್ಟ್ಸ್ ಕಾಲೇಜಿನ ತಂಡ ಪಡೆಯಿತು.

ಮೇಲಿನ ಸುದ್ದಿಯನ್ನು ತಮ್ಮ ಪ್ರತಿಷ್ಠಿತ ದಿನಪತ್ರಿಕೆಯಲ್ಲಿ ಪ್ರಕಟಿಸಿ ನಮ್ಮನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ನಿರ್ದೇಶಕರು